**ದಿಃ 24.08.2023 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆ :- ಮಾನ್ಯ ಸರ್ಕಾರಿ ಅಭಿಯೋಜಕರಿಂದ :-**

1. ನಾನು ಸ್ಥಳಕ್ಕೆ ಹೋಗಿ ಮೃತ ದೇಹವನ್ನು ನೋಡಿದ್ದೇನೆ. ಮೃತ ದೇಹದ ಮೇಲೆ ರಕ್ತ ಇತ್ತು. ಮೃತ ದೇಹದ ಮೇಲೆ ಒಡವೆಗಳು ಇರಲಿಲ್ಲ. ಸ್ಥಳೀಯ ವ್ಯಕ್ತಿಗಳು ಒಡವೆ ಸಲುವಾಗಿ ಕೊಲೆ ಮಾಡಿರುವುದಾಗಿ ಮಾತನಾಡಿಕೊಳ್ಳುತ್ತಿದ್ದರು. ಕತ್ತಿನ ಕರಿಮಣಿ ಮಾಂಗಲ್ಯ ಸರ ಮತ್ತು ಕಿವಿಯ ಓಲೆಗಳು ಇರಲಿಲ್ಲ. ನಾನು ಮೃತ ದೇಹವನ್ನು ನೋಡಿದಾಗ ಅಂದಾಜು ಮ.3.30 ಮೀರಿತ್ತು. ನ್ಯಾಯಾಲಯದ ಮುಂದೆ ಹಾಜರು ಇರುವ 1 ಮತ್ತು 2 ನೇ ಆರೋಪಿಗಳನ್ನು ನಾನು ಗುರುತಿಸಿದ್ದೇನೆ. ಸದರಿ ಆರೋಪಿಗಳು ದೇವರಗುಡ್ಡದ ನಿಂಗೇಗೌಡ ಅವರ ಮನೆಯ ಮುಂದೆ ಜೋರಾಗಿ ಓಡಿ ಹೋಗಿದ್ದರು. ನಾನು ತನಿಖಾಧಿಕಾರಿ ಸಮಕ್ಷಮ ಹೇಳಿಕೆ ಕೊಟ್ಟಿದ್ದೇನೆ. ನಾನು ಎರಡು ಸಲ ಪೊಲೀಸ್ ಠಾಣೆಗೆ ಭೇಟಿ ಕೊಟ್ಟಿದ್ದೇನೆ. ಆರೋಪಿಗಳನ್ನು ದಸ್ತಗಿರಿ ಮಾಡಿದ ನಂತರ ನನ್ನನ್ನು ಪೊಲೀಸ್ ಠಾಣೆಗೆ ಕರೆಸಿದ್ದರು. ನಾನು ಪೊಲೀಸ್ ಠಾಣೆಯಲ್ಲಿ ಆರೋಪಿಗಳನ್ನು ಗುರುತಿಸಿ ಆರೋಪಿಗಳು ಅಂದು ನಿಂಗೇಗೌಡ ಅವರ ಮನೆಯ ಮುಂದೆ ಜೋರಾಗಿ ಓಡಿ ಹೋಗಿದ್ದರು ಎಂದು ಹೇಳಿದ್ದೇನೆ.

**ಪಾಟೀ ಸವಾಲು :- ಆರೋಪಿಗಳ ಪರ ಶ್ರೀ ವಿ.ಬಿ.ಎಸ್ ವಕೀಲರಿಂದ :-**

2. ಮೃತಳ ಮಗ ಚಾಸಾ-1 ಇಂದು ನ್ಯಾಯಾಲಯಕ್ಕೆ ಬಂದಿದ್ದಾರೆ. ನಾನು ನಾಲ್ಕು ಸಲ ನ್ಯಾಯಾಲಯಕ್ಕೆ ಹಾಜರು ಆಗಿದ್ದೇನೆ ಮತ್ತು ಅದೇ ವೇಳೆ ಚಾಸಾ-1 ಅವರು ನ್ಯಾಯಾಲಯಕ್ಕೆ ಬಂದಿದ್ದರು ಎಂದರೆ ಸರಿಯಲ್ಲ. 1 ಮತ್ತು 2 ನೇ ಆರೋಪಿಗಳನ್ನು ಗುರುತಿಸಿದ್ದೇನೆ. ನಾನು 4 ನೇ ತರಗತಿ ವಿದ್ಯಾಭ್ಯಾಸ ಮಾಡಿದ್ದೇನೆ. ನಮ್ಮ ಊರಿನಲ್ಲಿ 150 ಮನೆಗಳು ಇವೆ. ಜಮೀನಿಗೆ ಹೋಗುವ ನಮ್ಮ ಗ್ರಾಮಸ್ಥರು ಕರಿಕಲ್ಲು ಬೋರೆ ಮೂಲಕ ಹೋಗುತ್ತಾರೆ. ನಮ್ಮ ಊರಿನಲ್ಲಿ ಯಾವ, ಯಾವ ಮನೆಯಲ್ಲಿ, ಯಾವ, ಯಾವ ವಯಸ್ಸಿನ ಹುಡುಗರು ಇದ್ದಾರೆ ಎಂದು ಹೇಳಲು ಬರುವುದಿಲ್ಲ. ಅಂದು ಬೆಳಗ್ಗಿನಿಂದ ಸಂಜೆಯ ತನಕ ಸದರಿ ದಾರಿಯಲ್ಲಿ ಓಡಾಡಿದ ವ್ಯಕ್ತಿಗಳ ಬಗ್ಗೆ ಹೇಳಲು

ಬರುವುದಿಲ್ಲ. 2 ನೇ ಆರೋಪಿ ತಂದೆ ಎಲ್ಲಿ ಇದ್ದಾರೆ ಎಂದು ಗೊತ್ತಿಲ್ಲ. 2 ನೇ ಆರೋಪಿ ತಾಯಿ 7-8 ತಿಂಗಳಿಂದ ನಮ್ಮ ಊರಿನಲ್ಲಿ ಇಲ್ಲ. 2 ನೇ ಆರೋಪಿ ತಾಯಿಯ ಹೆಸರು ಗೊತ್ತಿಲ್ಲ. 2 ನೇ ಆರೋಪಿ ತಾಯಿ ಮೂಲತಃ ನಮ್ಮ ಊರಿನವರು. 2 ನೇ ಆರೋಪಿ ತಂದೆ ಹುಟ್ಟು ಊರು ಗೊತ್ತಿಲ್ಲ. ನಮ್ಮ ಊರಿನಲ್ಲಿ 1 ರಿಂದ 4 ನೇ ತರಗತಿ ಶಾಲೆ ಇತ್ತು. 5 ನೇ ತರಗತಿಗೆ ಕಿರುಗಾವಲು ಅಥವಾ ಮೆಣಸಿನ ಕ್ಯಾತನ ಹಳ್ಳಿಗೆ ಹೋಗಬೇಕಿತ್ತು.

3. 1 ಮತ್ತು 2 ನೇ ಆರೋಪಿಗಳ ವಿದ್ಯಾಭ್ಯಾಸದ ಬಗ್ಗೆ ಗೊತ್ತಿಲ್ಲ. 1 ನೇ ಆರೋಪಿ ತಂದೆ -ತಾಯಿ ಕೃಷಿಕರು ಮತ್ತು ಊರಿನಲ್ಲಿ ಇದ್ದಾರೆ ಎಂದರೆ ಸರಿ. 2 ನೇ ಆರೋಪಿ ತಾಯಿ ನಮ್ಮ ಊರಿನಲ್ಲಿ ಹುಟ್ಟಿದ್ದರು ಎಂದರೆ ಸರಿ. 2 ನೇ ಆರೋಪಿ ಸಂಬಂಧಿಕರು ಈಗ ನಮ್ಮ ಊರಿನಲ್ಲಿ ಯಾರು ಇಲ್ಲ ಎಂದರೆ ಸರಿ. 2 ನೇ ಆರೋಪಿ 1 ರಿಂದ 4 ತರಗತಿ ತನಕ ನಮ್ಮ ಊರಿನ ತನ್ನ ಅಜ್ಜಿಯ ಮನೆಯಲ್ಲಿ ಉಳಿದುಕೊಂಡು ವಿದ್ಯಾಭ್ಯಾಸ ಮಾಡಿದ್ದರು ಎಂದು ಗೊತ್ತಿಲ್ಲ. 2 ನೇ ಆರೋಪಿ 9 ನೇ ತರಗತಿ ವಿದ್ಯಾಭ್ಯಾಸವನ್ನು ಬೆಂಗಳೂರಿನಲ್ಲಿ ಮಾಡಿದ್ದಾರೆ ಎಂದರೆ ಇರಬಹುದು. 2 ನೇ ಆರೋಪಿ ತನ್ನ 21 ನೇ ವಯಸ್ಸಿನ ತನಕ ಬೆಂಗಳೂರಿನ ಸಿದ್ದೇಶ್ವರ ಸ್ವಾಮಿ ಅನಾಥಾಲಯದಲ್ಲಿ ಇದ್ದರು ಎಂದರೆ ಇರಬಹುದು. ಬೆಂಗಳೂರು ಚಿತ್ರಕೂಟ ಕಾಲೇಜು ತಿಪ್ಪಗೊಂಡನಹಳ್ಳಿಯಲ್ಲಿ ದ್ವಿತೀಯ ಪಿ.ಯು.ಸಿ ವಿದ್ಯಾಭ್ಯಾಸ ಮಾಡಿದ್ದಾರೆ ಎಂದು ಗೊತ್ತಿಲ್ಲ. 2 ನೇ ಆರೋಪಿ 4 ನೇ ತರಗತಿ ವಿದ್ಯಾಭ್ಯಾಸ ನಂತರ ನಮ್ಮ ಊರಿನಲ್ಲಿ ವಾಸ ಇರಲಿಲ್ಲ ಎಂದರೆ ಸಾಕ್ಷಿದಾರರು ಆಗಾಗ ತನ್ನ ಅಜ್ಜಿಯ ಮನೆಗೆ ಬಂದು ಹೋಗುತ್ತಿದ್ದರು ಎಂದು ನುಡಿಯುತ್ತಾರೆ. 2 ನೇ ಆರೋಪಿ ಆಗಾಗ ತನ್ನ ಅಜ್ಜಿಯ ಮನೆಗೆ ಬಂದು ಹೋಗುತ್ತಿದ್ದ ದಿನಾಂಕಗಳನ್ನು ಹೇಳಲು ಬರುವುದಿಲ್ಲ. 2 ನೇ ಆರೋಪಿ ನಮ್ಮ ಊರಿನಲ್ಲಿ ವಿದ್ಯಾಭ್ಯಾಸ ಮಾಡುವ ಕಾಲದಲ್ಲಿ ಮತ್ತು ನಂತರದಲ್ಲಿಯೂ ಸಹ ನಾನು ನೋಡಿಲ್ಲ ಎಂದರೆ ಸರಿಯಲ್ಲ. ಚಾಸಾ-1 ಅವರ ಹೇಳಿಕೆಯ ಮೇರೆಗೆ 2 ನೇ ಆರೋಪಿಯನ್ನು ನಾನು ಗುರುತಿಸಿ ಸುಳ್ಳು ಸಾಕ್ಷಿ ಹೇಳಿದ್ದೇನೆ ಎಂದರೆ ಸರಿಯಲ್ಲ.

(ಆರೋಪಿ ಪರ ವಕೀಲರು ಆಧಾರ ಕಾರ್ಡ್, ಪ್ಯಾನ್ ಕಾರ್ಡ್ ಮತ್ತು ಎಸ್.ಎಸ್.ಎಲ್.ಸಿ ಅಂಕಪಟ್ಟಿ ನೋಟರಿ ಪ್ರತಿಗಳನ್ನು ಸಾಕ್ಷಿದಾರರಿಗೆ ಗುರುತಿಸುವ ಸಲುವಾಗಿ ಹಾಜರು ಮಾಡಿದ್ದು ಆರೋಪಿ ಪರ ವಕೀಲರ ಮನವಿಯನ್ನು ತಳಿ ಹಾಕಲಾಗಿದೆ.)

4. ನಾನು ಈ ಪ್ರಕರಣದಲ್ಲಿ ಸಾಕ್ಷಿ ಹೇಳಿದ ದಿನಾಂಕಗಳನ್ನು ಹೇಳಲು ಬರುವುದಿಲ್ಲ. ಮಹದೇವಮ್ಮ ಮೃತಪಟ್ಟ ಎಷ್ಟು ದಿನಗಳ ನಂತರ ನನ್ನನ್ನು ಠಾಣೆಗೆ ಕರೆಸಿದ್ದರು ಎಂದು ಹೇಳಲು ಬರುವುದಿಲ್ಲ. ನಾನು ವಿಷಯ ತಿಳಿದು ಶವ ಇದ್ದ ಸ್ಥಳಕ್ಕೆ ಹೋದಾಗ ಸಾಕಷ್ಟು ಜನರು ಸೇರಿದ್ದರು. ಸ್ಥಳದಲ್ಲಿ ಇದ್ದ ಪೊಲೀಸರು ಶವದ ಹತ್ತಿರಕ್ಕೆ ಹೋಗಲು ಬಿಟ್ಟಿರಲಿಲ್ಲ. ನಾನು ಶವ ಇದ್ದ ಸ್ಥಳಕ್ಕೆ ಹೋದಾಗ ಸ್ಥಳದಲ್ಲಿ ಇದ್ದ ಪೊಲೀಸರಿಗೆ ಆರೋಪಿಗಳು ನಿಂಗೇಗೌಡರ ಮನೆಯ ಮುಂದೆ ಓಡಿ ಹೋಗಿದ್ದ ಬಗ್ಗೆ ಹೇಳಿದ್ದೇನೆ. ಶವ ಇದ್ದ ಸ್ಥಳದಲ್ಲಿ ನಾನು ಸುಮಾರು ಅರ್ಧ ಗಂಟೆ ಅವಧಿ ತನಕ ಇದ್ದೆನು. ಸಾಯಂಕಾಲ ಪೊಲೀಸ್ ನಾಯಿಗಳನ್ನು ಸ್ಥಳಕ್ಕೆ ಕರೆಸಿದ್ದರು. ಪೊಲೀಸ್ ನಾಯಿಗಳು ಬಂದಾಗ ಸ್ಥಳದಲ್ಲಿ ಶವ ಇತ್ತು. ನಾನು ಶವ ಇದ್ದ ಸ್ಥಳದಿಂದ ಸ್ವಲ್ಪ ದೂರ ಇದ್ದು ನೋಡಿದ್ದೇನೆ. ಶವದ ಹತ್ತಿರ ಬಂದ ಪೊಲೀಸ್ ನಾಯಿ ಕರಿಕಲ್ಲು ಬೋರೆ ಕಡೆಗೆ ಸುತ್ತಲೂ ಓಡಾಡಿದೆ ಎಂದರೆ ಸರಿ. ಕರಿಕಲ್ಲು ಬೋರೆಯಲ್ಲಿ ಗೋಮಾಳ ಜಮೀನು ಮತ್ತು ಕೃಷಿ ಜಮೀನು ಇದೆ. ನಮ್ಮ ಗ್ರಾಮದವರು ಕರಿಕಲ್ಲು ಬೋರೆಗೆ ಹಸು ಮತ್ತು ಎಮ್ಮೆಗಳನ್ನು ಮೇಯಿಸಲು ಕರೆದುಕೊಂಡು ಹೋಗುತ್ತಾರೆ ಎಂದರೆ ಸರಿ.

5. ಕರಿಕಲ್ಲು ಬೋರೆಗೆ ಹೋಗಲು ಯಾವುದೇ ಅಡೆತಡೆಗಳು ಇಲ್ಲ ಎಂದರೆ ಸರಿ. ಶವದ ಮೇಲೆ ಒಡವೆಗಳು ಇರಲಿಲ್ಲ ಎಂದು ಸ್ಥಳೀಯ ವ್ಯಕ್ತಿಗಳು ನನಗೆ ತಿಳಿಸಿಲ್ಲ ಎಂದರೆ ಸರಿಯಲ್ಲ. ಆರೋಪಿಗಳು ನಿಂಗೇಗೌಡ ಅವರ ಮನೆಯ ಮುಂದೆ ಓಡಿ ಹೋಗುವಾಗ ಆರೋಪಿಗಳು ಧರಿಸಿದ್ದ ಬಟ್ಟೆಯ ಬಗ್ಗೆ ಹೇಳಲು ಬರುವುದಿಲ್ಲ. ನನ್ನನ್ನು ಪೊಲೀಸ್ ಠಾಣೆಗೆ ಕರೆಸಿ ಆರೋಪಿಗಳನ್ನು ತೋರಿಸಿಲ್ಲ ಎಂದರೆ ಸರಿಯಲ್ಲ. ನಾನು ಪೊಲೀಸ್ ಠಾಣೆಯಲ್ಲಿ ಎರಡು ಸಲ ಹೇಳಿಕೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. ನಾನು ಚಾಸಾ-1 ಅವರ ಜೊತೆ ಸೇರಿ ನನ್ನ ಹೇಳಿಕೆಗಳನ್ನು ದೋಷಾರೋಪಣ ಪಟ್ಟಿಯಲ್ಲಿ ಸೇರಿಸುವಂತೆ ಮಾಡಿದ್ದೇನೆ ಎಂದರೆ ಸರಿಯಲ್ಲ. ಮಹದೇವಮ್ಮ ಅವರ ಸಾವಿನ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ಚಾಸಾ-1 ಅವರ ಹೇಳಿಕೆಯ ಮೇರೆಗೆ ನಾನು ಸಾಕ್ಷಿ ಹೇಳಿದ್ದೇನೆ ಎಂದರೆ ಸರಿಯಲ್ಲ. ಮಹದೇವಮ್ಮ ಸಾವಿಗೆ ಮತ್ತು ಆರೋಪಿಗಳಿಗೆ ಸಂಬಂಧ ಇಲ್ಲ ಅದಾಗಿಯೂ ನಾನು ಸುಳ್ಳು ಸಾಕ್ಷಿ ಹೇಳಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ:-ಇಲ್ಲ.**

(ನನ್ನ ಉಕ್ತಲೇಖನಕ್ಕೆ ಮೇರೆಗೆ ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದ್ದನ್ನು ಯಥಾವತ್ತಾಗಿ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸ ಇ ಎ ಒ.,

2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮೈಸೂರು.